<u>**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.**</u>

ಅಸಲು ದಾವೆ ನಂ.334/2012

ಸಿಡಬ್ಲ್ಯೂ : 01
ದಿನಾಂಕಃ 21-02-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಯತೀಶಕುಮಾರ ಕೆ ಡಿ |
| ತಂದೆ ಹೆಸರು | - ಧರ್ಮಕುಮಾರ ಕೆ ಡಿ |
| ವಯಸ್ಸು | - 28 ವರ್ಷ |
| ಉದ್ಯೋಗ | - ಜೂನಿಯರ್ ಇಂಜಿನಿಯರ್ ಪುರಸಭೆ ಸವಣೂರ |
| ವಾಸ ಸ್ಥಳ | - ಸವಣೂರ |

<u>**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಪಿ ಆರ್ ಕೆ ವಕೀಲರಿಂದ**</u>

ದಿಃ15-05-2025 ರಿಂದ ಇಲ್ಲಿಯವರೆಗೂ ಪುರಸಭೆ ಸವಣೂರಿನಲ್ಲಿ ಜೂನಿಯರ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮಾನ್ಯ ನ್ಯಾಯಾಲಯದಿಂದ ನನ್ನನ್ನು ಕೋರ್ಟ ಕಮೀಷನರಾಗಿ ನೇಮಕ ಮಾಡಿದ್ದು, ನಾನು ನನ್ನ ಕಮೀಷನರ್ ಕೆಲಸವನ್ನು ಕೈಗೊಳ್ಳುವ ಪೂರ್ವದಲ್ಲಿ ಉಭಯ ಪಕ್ಷಗಾರರಿಗೂ ನೊಂದಾಯಿತ ಅಂಚೆ ಮೂಲಕ ನೋಟಸಗಳನ್ನು ನೀಡಿದ್ದು ಮತ್ತು ಅವರ ವಕೀಲರಿಗೆ ದೂರವಾಣಿ ಕರೆ ಮುಖಾಂತರ ತಿಳಿಸಿರುತ್ತೇನೆ.

ದಿಃ 02-01-2026 ರಂದು ಶುಕ್ರವಾರದಂದು ನಾನು ಅಳತೆ ಕಾರ್ಯವನ್ನು ಕೈಗೊಂಡಿರುತ್ತೇನೆ. ಆ ವೇಳೆಯಲ್ಲಿ ಉಭಯ ಪಕ್ಷಗಾರರು ಮತ್ತು ಅವರ ವಕೀಲರು ಹಾಜರಿದ್ದರು. ಉಭಯ ಪಕ್ಷಗಾರರ ವಕೀಲರು ಸಲ್ಲಿಸಿದ ಮೆಮೋ ಆಫ ಇನ್ ಕಸ್ಟ್ರಕ್ಷನಗೆ ಉತ್ತರಿಸಿದ್ದು ಮತ್ತು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನನ್ನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ವರದಿ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಮತ್ತು ಭಾವ ಚಿತ್ರಗಳನ್ನು ಒಟ್ಟಾರೆಯಾಗಿ ನಿಸಿ- 1 ಎಂದು ಗುರುತಿಸಲಾಯಿತು.

<u>**ಪಾಟೀಸವಾಲುಃ ವಾದಿ ಪರ ಶ್ರೀ ಪಿ ಆರ್ ಕೆ ವಕೀಲರಿಂದಃ**</u>

ಖರೀದಿ ಪತ್ರದ ಪ್ರಕಾರ ಪ್ರತಿವಾದಿಯರ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸಾಕ್ಷಿಯು ವರದಿಯನ್ನು ಪರಿಶೀಲಿಸಿ ಖರೀದಿ ಪತ್ರದ ಅಳತೆ ಮತ್ತು ಈ ಸ್ವತ್ತು ಉತಾರದ ಅಳತೆ

ವ್ಯತ್ಯಾಸವಿದೆ. ಪ್ರತಿವಾದಿಯ ಖರೀದಿ ಪತ್ರದ ಪ್ರಕಾರ ಇರುವ ಚಕ್ಕಬಂದಿ ಮತ್ತು ಅಳತೆಯುಳ್ಳ ಆಸ್ತಿಯು ಅಸ್ತಿತ್ವದಲ್ಲಿ ಅಲ್ಲಿ ಇಲ್ಲ ಎಂದರೆ ಸರಿ. ಪ್ರತಿವಾದಿಯರು ವಾಸಿಸುವ ಆಸ್ತಿಯ ಪೂರ್ವಕ್ಕೆ ಒಂದು ಪ್ಲಿಂತ ಹಾಕಿದ್ದಾರೆ ಎಂದರೆ ಸರಿ. ಪ್ಲಿಂತ್ ಹಾಕಿದ ಸ್ಥಳಕ್ಕೂ ಮತ್ತು ಖರೀದಿ ಪತ್ರದ ಚಕ್ಕಬಂದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಮುಂದುವರೆದು ಹಕ್ಕು ಬಿಟ್ಟ ಪತ್ರದ ಪ್ರಕಾರ ಪ್ಲಿಂತ ಎರಿಯಾ ಬರುತ್ತದೆ. ಹಕ್ಕು ಬಿಟ್ಟ ಪತ್ರದ ಪ್ರಕಾರ ಚೆಕ್ಕಬಂದಿ ಏನಾದರೂ ಹೇಳಲು ಆಗುತ್ತದೆಯಾ ಎಂದರೆ ಹಕ್ಕುಬಿಟ್ಟ ಪತ್ರದಲ್ಲಿ ಚಕ್ಕಬಂದಿ ನಮೂದಿಸಿರುವುದಿಲ್ಲ. ಹಕ್ಕು ಬಿಟ್ಟ ಪತ್ರವನ್ನು ನ್ಯಾಯಾಲಯದಿಂದ ನಿಮಗೆ ನೀಡಿರುವುದಿಲ್ಲ ಎಂದರೆ ಸರಿ. ಮುಂದುವರೆದು ಅದನ್ನು ಪ್ರತಿವಾದಿಯರ ಪರ ವಕೀಲರು ನೀಡಿರುತ್ತಾರೆ. ಹಕ್ಕುಬಿಟ್ಟ ಪತ್ರದಲ್ಲಿ ನಮೂದಿಸಿದಂತಹ ಆಸ್ತಿಯ ಚಕ್ಕಬಂದಿ ಇಲ್ಲದೇ ಇರುವುದರಿಂದ ಸದರಿ ಆಸ್ತಿಯನ್ನು ಗುರುತಿಸಲು ನಿಮಗೆ ಆಗಿರುವುದಿಲ್ಲ ಎಂದರೆ ಸರಿ.

ಸಾಕ್ಷಿಗೆ ತನ್ನ ವರದಿಯ ಒಂದು ಭಾವ ಚಿತ್ರವನ್ನು ತೋರಿಸಿದ್ದು ಅದನ್ನು ನಿಸಿ-1(ಎ) ಎಂದು ಗುರುತಿಸಿದ್ದು ಅದನ್ನು ತೋರಿಸಿ ಇದರಲ್ಲಿ ಪ್ಲಿಂತ್ ಏರಿಯಾ ಕಾಣುತ್ತದೆ ಎಂದರೆ ಸರಿ. ಅದರಲ್ಲಿ ಇರುವ ಹಳದಿ ಬಣ್ಣದ ಗೋಡೆಯು ಪ್ರತಿವಾದಿಯರು ವಾಸಿಸುವ ಮನೆಯ ಗೋಡೆ ಆಗಿರುತ್ತದೆ ಎಂದರೆ ಸರಿ. ಸದರಿ ಗೋಡೆಯ ಪೂರ್ವಕ್ಕೆ ಪ್ಲಿಂತ್ ಇದೆ ಎಂದರೆ ಸರಿ. ಪ್ಲಿಂತ್ ಏರಿಯಾದ ಉತ್ತರ- ದಕ್ಷಿಣ ಮತ್ತು ಪೂರ್ವಕ್ಕೆ ಯಾವುದೇ ಗೋಡೆ ಇಲ್ಲ ಎಂದರೆ ಸರಿ. ಸದರಿ ಪ್ಲಿಂತ್ ಏರಿಯಾದ ಪೂರ್ವಕ್ಕೆ ಲಾಲಶಾ ಕಟ್ಟಿ ಮಸೀದಿಯ ಜಾಗ ಇರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ. ಆದರೆ ಬಯಲು ಜಾಗ ಇರುತ್ತದೆ. ಸದರಿ ಬೈಲು ಜಾಗ ಮತ್ತು ಪ್ರತಿವಾದಿಯರು ವಾಸಿಸುವ ಮನೆ ನಡುವೆ ಪ್ಲಿಂತ್ ಇರುತ್ತದೆ ಎಂದರೆ ಸರಿ. ಪ್ಲಿಂತ್ ಏರಿಯಾ ಇರುವ ಜಾಗದಲ್ಲಿ ಜನರು ಓಡಾಡದೇ ಇರುವುದರಿಂದ ಈಗ ಮುಳ್ಳುಗಳು ಬೇಳೆದಿವೆ ಎಂದರೆ ಸರಿ.

ಪ್ಲಿಂತ್ ಏರಿಯಾದ ಉತ್ತರ ಭಾಗದಲ್ಲಿ ಯಾವುದೇ ಮುಳ್ಳಿನ ಗಿಡಗಳು ಇಲ್ಲ ಎಂದರೆ ಸಾಕ್ಷಿಯು ಭಾವ ಚಿತ್ರ ಪರಿಶೀಲಿಸಿ ಇದೆ ಎಂದು ನುಡಿಯುತ್ತಾರೆ. ಸದರಿ ಗಿಡಗಳು ಇತ್ತೀಚೆಗೆ ಬೇಳೆದಿವೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ಮೊದಲು ಗಿಡಗಳು ಬೆಳೆದಿದ್ದರೆ ಪ್ಲಿಂತ್ ಹಾಕಲು ಬರುವುದಿಲ್ಲ ಎಂದರೆ ಕಷ್ಟ ಆಗುತ್ತದೆ. ಸಾಮಾನ್ಯವಾಗಿ ಗಿಡಗಳು ಇದ್ದ ಸ್ಥಳದಲ್ಲಿ ಪ್ಲಿಂತ್ ಹಾಕಲು ಆಗುವುದಿಲ್ಲ ಎಂದರೆ ಹಾಕಬಹುದು. ಹೊಸದಾಗಿ ಪ್ಲಿಂತ್ ಹಾಕಬೇಕೆಂದರೆ ಆ ಜಾಗವು ಸ್ವಚ್ಚವಾಗಿರಬೇಕು ಎಂದರೆ ಸರಿ.

ಬಯಲು ಜಾಗದಲ್ಲಿ ದೊಡ್ಡ ದೊಡ್ಡ ಮರಗಳು ಬೆಳೆದಿವೆ ಎಂದರೆ ಸಾಕ್ಷಿಯು ಭಾವ ಚಿತ್ರಗಳನ್ನು ನೋಡಿ ದೊಡ್ಡ ಮರಗಳು ಇಲ್ಲ, ಗಿಡಗಂಟಿಗಳು ಇರುತ್ತವೆ. ದಾರಿ ಇದ್ದರು ನೀವು ಇಲ್ಲ ಎಂದು ಸುಳ್ಳು ದಾಖಲೆಗಳನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಮುಂದುವರೆದು ದಾರಿ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳು ಲಭ್ಯ ಇರುವುದಿಲ್ಲ. ಪುರಸಭೆ

ಸವಣೂರನಲ್ಲಿ ಸಿ ಟಿ ಸರ್ವೆಯ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಮೆಮೊ ಆಫ್ ಇನ್‌ಸ್ಟ್ರಕ್ಷನ್ಸ ಪ್ರಕಾರ ಕೆಲಸ ಮಾಡದೇ ಸುಳ್ಳು ವರದಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಸ್ ಪಿ ವಕೀಲರಿಂದಃ**

ಪ್ರತಿವಾದಿಯರ ಖರೀದಿ ಪತ್ರದ ಪ್ರಕಾರ ಅಳತೆ ಮಾಡಿದ್ದೀರಾ ಎಂದರೆ ಮಾಡಿರುತ್ತೇನೆ. ಖರೀದಿ ಪತ್ರದ ಪ್ರಕಾರ ಅಳತೆ ಎಷ್ಟು ಇದೆ ಎಂದರೆ ನಾನು ಅಳತೆ ಮಾಡಿರುವುದಿಲ್ಲ. ಪ್ರತಿವಾದಿಯರ ಆಸ್ತಿಯನ್ನು ನೀವು ಅಳತೆ ಮಾಡಿದ್ದೀರಾ ಎಂದರೆ ಮೆಮೊ ಆಫ್ ಇನ್‌ಸ್ಟ್ರಕ್ಷನ್ಸ ನಲ್ಲಿ ಕೇಳಿರುವುದಿಲ್ಲ ಆದ್ದರಿಂದ ನಾನು ಮಾಡಿರುವುದಿಲ್ಲ. ದಾವಾ ಆಸ್ತಿ ಯಾವುದು ಎಂದರೆ ಸರ್ವೆ ನಂ. 338/30/1 ಇರುತ್ತದೆ. ವಾದಿಯರು ಸಲ್ಲಿಸಿದ ಹಾತ್ ನಕಾಶೆಯನ್ನು ನೋಡಿದ್ದೀರಾ ಎಂದರೆ ನೋಡಿರುತ್ತೇನೆ. ಆ ಪ್ರಕಾರ ನೀವು ಅಳತೆ ಮಾಡಿದ್ದೀರಾ ಎಂದರೆ ಮಾಡಿರುತ್ತೇನೆ. ಪ್ರತಿವಾದಿಯರ ಆಸ್ತಿಯ 2 ಉತಾರಗಳಿದ್ದು ಅದು 338/30 ಮತ್ತು 338/30/1 ಇರುತ್ತದೆ ಎಂದರೆ ಸರಿ. ಈ ಎರಡು ಆಸ್ತಿಗಳನ್ನು ಅಳತೆ ಮಾಡಿದ್ದೀರಾ ಎಂದರೆ ಆಸ್ತಿ ನಂ. 338/30/1 ನ್ನು ಅಳತೆ ಮಾಡಿರುತ್ತೇನೆ. ಅದರ ಉದ್ದ ಆಗಲ ಎಷ್ಟು ಇದೆ ಎಂದರೆ ಸಾಕ್ಷಿಯು ವರದಿಯನ್ನು ಪರಿಶೀಲಿಸಿ ಅದು ಉತಾರದಲ್ಲಿ ಇರುತ್ತದೆ ನಾನು ಪ್ಲಿಂತ ಏರಿಯಾ ಮಾತ್ರ ಅಳತೆ ಮಾಡಿದ್ದೇನೆ. ಪ್ಲಿಂತ್ ಎರಿಯಾ ಎಷ್ಟು ಅಳತೆ ಇದೆ ಎಂದರೆ ಸಾಕ್ಷಿಯು ವರದಿಯನ್ನು ಪರಿಶೀಲಿಸಿ ಪೂರ್ವ- ಪಶ್ಚಿಮ 33 ಅಡಿ 00 ಇಂಚು, ಉತ್ತರ – ದಕ್ಷಿಣ 24 ಅಡಿ 05 ಇಂಚು ಇರುತ್ತದೆ. ಆಸ್ತಿ ನಂ. 338/30/1 ಇದಕ್ಕೆ ಹೊಂದಿಕೊಂಡು ಪೂರ್ವಕ್ಕೆ ಸಾರ್ವಜನಿಕ ರಸ್ತೆ ಇದೆಯಾ ಎಂದರೆ ರಸ್ತೆ ಯಾವುದು ಇಲ್ಲ ಮುಂದುವರೆದು ಗಿಡಗಂಟಿಗಳು ಬೇಳೆದಿರುತ್ತವೆ. ಪುರಸಭೆ ಮತ್ತು ಕಂದಾಯ ಇಲಖೆಗಳ ದಾಖಲೆಗಳ ಪ್ರಕಾರ ಅಲ್ಲಿ ಸಾರ್ವಜನಿಕ ರಸ್ತೆ ಇರುವ ಬಗ್ಗೆ ಯಾವುದಾದರೂ ದಾಖಲೆ ಪರಿಶೀಲನೆ ಮಾಡಿದ್ದೀರಾ ಎಂದರೆ ಕಂದಾಯ ದಾಖಲೆಗಳನ್ನು ಪರಿಶೀಲಸಿರುವುದಿಲ್ಲ. ಪುರಸಬೆ ದಾಖಲೆಗಳಲ್ಲಿ ರಸ್ತೆ ಇರುವುದಿಲ್ಲ.

ಪ್ಲಿಂತ್ ಹಾಕಿರುವುದು ಸಾರ್ವಜನಿಕ ರಸ್ತೆಯಲ್ಲಿ ಇರುವುದಿಲ್ಲ ಎಂದರೆ ಸರಿ. ಆಸ್ತಿ ನಂ. 338/30/1 ಕ್ಕೆ ಹೊಂದಿಕೊಂಡು ಪೂರ್ವಕ್ಕೆ ಯಾರ ಆಸ್ತಿ ಇದೆ ಎಂದರೆ ಬಯಲು ಜಾಗೆ ಇದ್ದು ಪರಡಿ ನಂ. 28 ಇರುತ್ತದೆ. ಪರಡಿ ನಂ. 28 ರಲ್ಲಿ ಸಾರ್ವಜನಿಕ ರಸ್ತೆ ಇರುವ ಬಗ್ಗೆ ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಮೆಮೊ ಆಫ್ ಇನ್‌ಸ್ಟ್ರಕ್ಷನ್ಸ 5 ನೇ ಅಂಶಕ್ಕೆ ಏನೆಂದು ಉತ್ತರ ನೀಡಿದ್ದೀರಿ ಎಂದರೆ ಸಾಕ್ಷಿಯು ಕೈಬರಹದ ಉತಾರ ಮತ್ತು ಹಕ್ಕುಬಿಟ್ಟ ಪತ್ರದ ಅಳತೆಗಳು ವ್ಯತ್ಯಾಸ ಇರುತ್ತವೆ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಪ್ರತಿವಾದಿಯರ ಖರೀದಿ ಪತ್ರವನ್ನು ಪಡೆದಿದ್ದರು ಸಹ ಅದನ್ನು ಅಳತೆ ಮಾಡಿ ಸುಳ್ಳು ವರದಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಸಲ್ಲಿಸಿದ ಖರೀದಿ ಪತ್ರದಂತೆ

ಸ್ಥಾನಿಕವಾಗಿ ಆಸ್ತಿ ನಂ. 338/30 ರ ಅಳತೆ ಎಷ್ಟು ಇದೆ ಎಂದರೆ ನಮಗೆ ಮೆಮೊ ಆಫ್ ಇನ್‌ಸ್ಟ್ರಕ್ಷನ್ಸ ನಲ್ಲಿ ಕೇಳದೆ ಇದುದ್ದರಿಂದ ನಾವು ಅಳತೆ ಮಾಡಿರುವುದಿಲ್ಲ. ಆಸ್ತಿ ನಂ. 338/30/1 ರಲ್ಲಿರುವ ಪ್ಲಿಂತ್ ಎರಿಯಾ ಸಾರ್ವಜನಿಕ ಆಸ್ತಿಯಲ್ಲಿ ಇರುವುದಿಲ್ಲ ಎಂದರೆ ಅದನ್ನು ದಾಖಲೆ ಪರಿಶೀಲಿಸಿ ಹೇಳಬಹುದು. ಆಸ್ತಿ ನಂ. 338/30/1 ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ನ್ಯಾಯಾಲಯದ ದಾಖಲೆ ಪರಶೀಲಿಸಿ ಮೃತ 1 ನೇ ವಾದಿಯರ ಹೆಸರಿನಲ್ಲಿ ಇದೆ. ಆಸ್ತಿ ನಂ. 338/30 ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ನ್ಯಾಯಾಲಯದ ದಾಖಲೆ ಪರಶೀಲಿಸಿ ಕೇದಾರಪ್ಪ ಬಾಬ್ನಿ/ ಪ್ರತಿವಾದಿ 1ಆಯ್ ರವರ ಹೆಸರಿನಲ್ಲಿ ಇದೆ. ಸದರಿ ಎರಡು ಆಸ್ತಿಗಳು ಅಸ್ತಿತ್ವದಲ್ಲಿ ಇವೆ ಎಂದರೆ ಪ್ರತಿವಾದಿಯರ ಖರೀದಿ ಪತ್ರ ಮತ್ತು ಹಕ್ಕುಬಿಟ್ಟ ಪತ್ರದ ಆಧಾರದ ಮೇಲೆ ಆಸ್ತಿ ನಂ. 338/30 ರ ಪೂರ್ವ ದಿಕ್ಕಿಗೆ ಆಸ್ತಿ 338/30/1 ಇದೆ. ಸದರಿ ಆಸ್ತಿಗಳು ಖಾಸಗಿ ಆಸ್ತಿಗಳು ಎಂದರೆ ಪ್ರತಿವಾದಿಯರ ಖರೀದಿ ಪತ್ರ ಮತ್ತು ಹಕ್ಕುಬಿಟ್ಟ ಪತ್ರದ ಪ್ರಕಾರ ಖಾಸಗಿ ಆಸ್ತಿಗಳು. ಖರೀದಿ ಪತ್ರ ನಿಮಗೆ ಲಭ್ಯವಿದ್ದರು ಸಹ ಅಳತೆ ಮಾಡದೇ ನೀವು ವರದಿಯನ್ನು ಸಲ್ಲಿಸಿರದ್ದೀರಿ ಎಂದರೆ ಮೆಮೊ ಆಫ್ ಇನ್‌ಸ್ಟ್ರಕ್ಷನ್ಸಲ್ಲಿ ಅದನ್ನು ಕೇಳಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.